***(ಸಾಕ್ಷಿಯನ್ನು ದಿಃ 09-07-2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿ ಮುಂದುವರಿದ ಮುಖ್ಯವಿಚಾರಣೆಗೆ ಒಳಪಡಿಸಲಾಯಿತು.)***

**ಮುಂದುವರಿದ ಮುಖ್ಯವಿಚಾರಣೆ ಃ ಹಿರಿಯ ಸ ಸ ಅ ರವರಿಂದ 'ರಿಂದ**

ನಾನು ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದ್ರಿ ದಾಖಲೆಯು ಫಿರ್ಯಾದು ಆಗಿದ್ದು, ಅದನ್ನು ನಿ.ಪಿ. 1 ಕ್ಕೆ ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.1 (ಎ) ಎಂದು ನಿಶಾನಿಸಲಾಯಿತು. ನಿ.ಪಿ.1 – ದೂರನ್ನು ಯಾರು ಬರವಣಿಗೆ ಮಾಡಿದ್ದಾರೆ ಮತ್ತು ಅದರಲ್ಲಿ ಏನು ಬರೆದಿದ್ದಾರೆ ಅಂತ ನನಗೆ ಗೊತ್ತಿಲ್ಲ. ಅದೇ ರೀತಿ ನನಗೆ ಮಾಶಾ ಅಬ್ದುಲ್ ಲತೀಫ್ ಮತ್ತು ಸೈಯದ್ ಖಲೀಮುದ್ದೀನ ಎಂಬುವವರ ಪರಿಚಯ ಇರುವುದಿಲ್ಲ. ಸದ್ರಿ ವ್ಯಕ್ತಿಗಳು ಮತ್ತು ನಾನು ಯಾವ ಕಾರಣಕ್ಕಾಗಿ ನಿ.ಪಿ.1 – ದೂರಿಗೆ ಸಹಿ ಮಾಡಿದ್ದೇವೆ ಅಂತ ಹೇಳಲಾಗುವುದಿಲ್ಲ. ಪೊಲೀಸರು ನನ್ನನ್ನು ಕುರಿತು ಯಾವುದೇ ಮರು ವಿಚಾರಣೆ ಮಾಡಿಲ್ಲ ಮತ್ತು ಯಾವುದೇ ಮರು ಹೇಳಿಕೆ ಪಡೆದುಕೊಂಡಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ ಸ ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಹಿರಿಯ ಸ ಸ ಅ ರವರಿಂದ**

ನಾನು ದ್ವಿತೀಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆಯಲ್ಲಿ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಉರ್ದು ಮತ್ತು ಇಂಗ್ಲೀಷ ಭಾಷೆಯಲ್ಲಿ ವ್ಯಾಸಂಗ ಮಾಡಿದ್ದೇನೆ. ನಿ.ಪಿ.1 ಕ್ಕೆ ನಾನು ಸಹಿ ಮಾಡುವ ಕಾಲಕ್ಕೆ ಅದರಲ್ಲಿ ಬರವಣಿಗೆ ಇರಲಿಲ್ಲ. ನಾನು ಸಾಮಾನ್ಯವಾಗಿ ಬೇರೆ ಕಡೆ ಯಾವುದೇ ದಾಖಲೆಗಳಿಗೆ ಓದಿ ನೋಡದೇ ಸಹಿ ಮಾಡುವುದಿಲ್ಲ. ನಿ.ಪಿ.1 ಕ್ಕೆ ನಾನು ಸಹಿ ಮಾಡುವ ಕಾಲಕ್ಕೆ ಪೊಲೀಸರಿಗೆ ನಾನು ಯಾವುದೇ ತಕರಾರು ಮಾಡಿರುವುದಿಲ. ಖಾಲಿ ಬಿಳಿ ಹಾಳೆಗೆ ಪೊಲೀಸರು ನನ್ನ ಸಹಿ ಪಡೆದಿದ್ದಾರೆ ಎಂಬುದಾಗಿ ಪೊಲೀಸ ಮೇಲಾಧಿಕಾರಿ ಅಥವಾ ಉನ್ನತ ಅಧಿಕಾರಿಗಳಿಗೆ ಯಾವುದೇ ದೂರು ಅರ್ಜಿ ಸಲ್ಲಿಸಿರುವುದಿಲ್ಲ.

ಸದ್ರಿ ಪ್ರಕರಣದಲ್ಲಿ ನಾನು ನಿರುದ್ಯೋಗಿಯಾಗಿದ್ದು ಜನವರಿ 2002 ನೇ ಇಸ್ವಿಯಲ್ಲಿ ಮಾಶಾ ಮಾಸ್ಟರ ಇವರು ನನಗೆ ಕಾರವಾರದಲ್ಲಿ ಪರಿಚಯ ಆಗಿದ್ದು, ನಂತರ ಅವರು ನನಗೆ ವಾಸಿಂ ಚೌದರಿ ಎಂಬುವವರನ್ನು ಪರಿಚಯ ಮಾಡಿಕೊಟ್ಟು ಸದ್ರಿ ವಾಸಿಂ ಚೌದರಿ ಈತನು ತನಗೆ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ನೌಕರಿ ಕೊಡಿಸುತ್ತೇನೆಂಬುದಾಗಿ ಹೇಳಿದ್ದು ಅದೇ ರೀತಿ ನನ್ನ ತಂದೆಯವರಿಗೆ ಎಲ್ಲಾ ಮಿನಿಸ್ಟರಗಳ ಪರಿಚಯ ಇರುತ್ತದೆ, ಅದಕ್ಕಾಗಿ ನಿನಗೂ ಸಹ ಸರ್ಕಾರಿ ನೌಕರಿ ಕೊಡಿಸುತ್ತೇನೆಂಬುದಾಗಿ ಹೇಳಿದ್ದು, ನಂತರ ಸಮಾಜ ಕಲ್ಯಾಣ ಇಲಾಖೆಯಲ್ಲಿ 1500 ಹುದ್ದೆಗಳು ಖಾಲಿ ಇದ್ದು, ಸದ್ರಿ ಇಲಾಖೆಯಲ್ಲಿ ನನಗೆ ಒಂದು ನೌಕರಿ ಕೊಡಿಸುತ್ತೇನೆಂಬುದಾಗಿ ತಿಳಿಸಿದ್ದು, ಅದೇ ರೀತಿ ತಾನು

ಟಿ.ಸಿ.ಎಚ್.ಗೆ ಸೀಟು ಕೊಡಿಸುತ್ತೇನೆ, ಎಸ್ ಎಸ್ ಎಲ್ ಸಿ ಮತ್ತು ಪಿ.ಯು.ಸಿ., ಡಿಗ್ರಿ ವಿದ್ಯಾರ್ಥಿಗಳನ್ನು ಪಾಸು ಮಾಡಿಸಿ ಕೊಡಿಸುತ್ತೇನೆ, ನಿಮಗೆ ಯಾರಾದರೂ ಪರಿಚಯ ಇದ್ದರೆ ನನಗೆ ತಿಳಿಸಿ ಹೇಳಿದ್ದರು ಎಂಬುದಾಗಿ ನಿ.ಪಿ.1 ದೂರಿನಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ವಾಸಿಂ ಚೌದರಿ ನನಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಪ. ಡಿ. ಸಿ ಕೆಲಸ ಕೊಡಿಸುತ್ತೇನೆಂಬುದಾಗಿ ಹೇಳಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ನೌಕರಿ ಕೊಡಿಸಲು ರೂ.40,000-00 ಖರ್ಚು ಬರುತ್ತದೆ, ತನಗೆ ಮುಂಗಡವಾಗಿ ರೂ. 5000-00 ಹಣ ಅದರ ಜೊತೆಯಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮಾರ್ಕ್ಸ್‌ಕಾರ್ಡ, ಹಾಗೂ ಟಿ.ಸಿ. ಮೂಲ ಪ್ರತಿ ಎಂಬುದಾಗಿ ತಿಳಿಸಿ ನಾನು ಪೆಬ್ರವರಿ ತಿಂಗಳಿನಲ್ಲಿ ಬರುತ್ತೇನೆ ಎಂಬುದಾಗಿ ಹೇಳಿ ಹೋಗಿದ್ದರು ಎಂದು ನಿ.ಪಿ.1 – ದೂರಿನಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿಃ 12-02-2002 ರಂದು ಸಂಜೆ 4-30 ಗಂಟೆಗೆ ಆತ ಕಾರವಾರಕ್ಕೆ ಬಂದು ಮನೆಗೆ ಪೋನ ಮಾಡಿ ಬೆಂಗಳೂರಿಗೆ ಹೋಗುವವನಿದ್ದೇನೆ, ರೂ.5000-00 ಮತ್ತು ಟಿ.ಸಿ., ಹಾಗೂ ಮಾರ್ಕ್ಸ್‌ಕಾರ್ಡನ ಮೂಲ ಪ್ರತಿಗಳನ್ನು ತಂದು ಕೊಡುವುದಾಗಿ ತಿಳಿಸಿದ್ದು, ಆಗ ನಾನು ಆರೋಪಿಗೆ ಮನೆಗೆ ಬರುವಂತೆ ತಿಳಿಸಿದ್ದು ನಂತರ ಆರೋಪಿಯು ನಮ್ಮ ಮನೆಗೆ ಬಂದಿದ್ದು, ನಮ್ಮ ಮನೆಯಲ್ಲಿದ್ದ ನನ್ನ ತಂದೆ ಮತ್ತು ಅಣ್ಣಂದಿರಿಗೂ ಸಹ ಸದ್ರಿ ವಿಷಯ ತಿಳಿಸಿ ರೂ.5000-00 ಹಣ, ಎಸ್ ಎಸ್ ಎಲ್ ಸಿ, ಮತ್ತು ಪಿ ಯು ಸಿ ಮಾರ್ಕ್ಸ್‌ಕಾರ್ಡಗಳನ್ನು ಪಡೆದುಕೊಂಡು ಇನ್ನುಳಿದ ರೂ. 35,000-00 ಗಳನ್ನು ಇನ್ನು ಎರಡು ತಿಂಗಳಲ್ಲಿ ರೆಡಿ ಮಾಡಿಕೊಡಲು ಹೇಳಿ ಹೋಗಿದ್ದರು ಎಂಬುದಾಗಿ ನಿ.ಪಿ.1 ರಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

ನಂತರ ದಿಃ 14-04-2002 ರಂದು ಆರೋಪಿಯು ಕಾರವಾರದ ಆನಂದ ಲಾಡ್ಜನಲ್ಲಿ ವಾಸೀಂ ಮತ್ತು ಆತನ ಗೆಳೆಯ ಜಾವೇದ ಹಾಗೂ ಇತರೇ ಇಬ್ಬರು ವ್ಯಕ್ತಿಗಳು ಹಾಜರಿದ್ದು ಆಗ ನಾನು ಮತ್ತು ನನ್ನ ಗೆಳೆಯರಾದ ಅಬ್ದುಲ್ ಸತ್ತಾರ ಅಹ್ಮದ ಶೇಖ, ಸುರೇಶ ಕಾಂಬ್ಳೆ, ಸೈಯದ್ ಖಲೀಮುದ್ದೀನ್, ಸೈಯದ ಮಕ್ತಾರ ಅಹ್ಮದ, ಇಕ್ಬಾಲ್ ಮುಲ್ಲಾ ಇವರೆಲ್ಲರೂ ನನ್ನ ಜೊತೆ ಆನಂದ ಲಾಡ್ಜಗೆ ಬಂದಿದ್ದು, ನನ್ನಂತೆ ಅವರು ಕೂಡ ವಸೀಂ ತಂದೆ ಜಹೀದ ಅಹ್ಮದ ಚೌದರಿಗೆ ಹಣವನ್ನು ಕೊಟ್ಟಿರುತ್ತಾರೆ ಮತ್ತು ನಾನು ವಾಸೀಂ ಚೌದರಿಗೆ ರೂ.5000-00 ಮುಂಗಡ ಹಣ ಮತ್ತು ದಿಃ 14-04-2002 ರಂದು ರೂ.32,500-00 ಈ ರೀತಿ ಒಟ್ಟು ರೂ. 37,500-00 ಹಣ ಕೊಟ್ಟಿದ್ದೇನೆಂಬುದಾಗಿಯೂ ಸಹ ನಿ.ಪಿ.1 ರ ದೂರಿನಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

ನಂತರ ಒಂದು ವಾರದ ಒಳಗೆ ನಿಮಗೆಲ್ಲಾ ಸರ್ಕಾರಿ ನೌಕರಿ ಬರುತ್ತದೆ ಎಂಬುದಾಗಿ ಹೇಳಿ ಹಣ ಪಡೆದುಕೊಂಡು ಹೋಗಿದ್ದು ನಂತರ ಈ ಬಗ್ಗೆ ನನಗಾಗಲೀ ಅಥವಾ ನನ್ನ ಗೆಳೆಯರಿಗಾಗಲೀ ಯಾವುದೇ ನೌಕರಿ ಕೊಡಿಸದೇ ನಮ್ಮಿಂದ ಹಣ ಪಡೆದುಕೊಂಡು ಹೋಗಿದ್ದು, ವಾಸೀಂ ಚೌದರಿ,

ಆತನ ಗೆಳೆಯರಾದ ಶಿರ್ಶಿಯ ಜಾವೇದ ಅಹ್ಮದ, ಧಾರವಾಡದ ಇಫ್ತಿಕಾ ಅಹ್ಮದ್, ಇಸಾಕ, ಫರೀಬ ರವರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮತ್ತು ನನ್ನಿಂದ ತೆಗೆದುಕೊಂಡಂತಹ ಹಣವನ್ನು ಕೊಡಿಸಿಕೊಡಬೇಕೆಂದು ದಿಃ 22-5-2002 ರಂದು ನಿ.ಪಿ.1 ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿಃ 27-05-2002 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಜನವರಿ ತಿಂಗಳಿನಲ್ಲಿ ನನಗೆ ಪರಿಚಯ ಮಾಡಿಕೊಂಡ ವಾಸೀಂ ಚೌದರಿ ಈತನ ಜೊತೆಯಲ್ಲಿ ಸೈಯದ್ ಜಾವೇರಾ, ಇಫ್ತಿಕಾರ ಅಹ್ಮದ ಸರವಾರ, ಇಸಾಕ ಅಹ್ಮದ ಸರವಾರ, ಪರೀದ್ ಅಹ್ಮದ ಸರವಾರ, ಇವರೆಲ್ಲರೂ ಇದ್ದು ಇವರು ಸಹ ಸರ್ಕಾರಿ ನೌಕರಿ ಕೊಡಿಸುತ್ತಾರೆ ಎಂದು ಮೋಸ ಮಾಡಿದ್ದಾರೆ ಎಂದು ಹಾಗೂ ಅದೇ ರೀತಿ ದಿ : 12-02-2002 ರಂದು ವಾಸೀಂ ಚೌದರಿ ಮತ್ತು ಆತನ ಸಂಗಡಿಗಳು ಕೂಡಿ ಇಂಡಿಕಾ ಕಾರ್ ನಂ. ಕೆ ಎ 25/ ಎಂ -6243 ನೇದರಲ್ಲಿ ನಮ್ಮ ಮನೆಗೆ ಬಂದಿದ್ದು, ನಮ್ಮಿಂದ ರೂ. 5000-00 ಮುಂಗಡ ಹಣ ಪಡೆದುಕೊಂಡು, ನಂತರ ದಿಃ 14-04-2002 ರಂದು ವಸೀಂ ಮತ್ತು ಈ ಮೇಲೆ ಆತನ 4 ಜನ ಸಂಗಡಿಗರು ಕೂಡಿಕೊಂಡು ಅದೇ ಕಾರು ಮತ್ತು ಟಾಟಾ ಸುಮೋ ವಾಹನ ಸಂಖ್ಯೆ ಕೆ ಎ 31/ 2594 ನೇದರಲ್ಲಿ ಕಾರವಾರಕ್ಕೆ ಬಂದು ಆನಂದ ಲಾಡ್ಜನ ರೂಮ ನಂ. 204 ರಲ್ಲಿ ಉಳಿದಿದ್ದು ಈ ರೀತಿ ಮೋಸ ಮಾಡಿದ್ದಾರೆ ಎಂಬುದಾಗಿ ಪೊಲೀಸರ ಮುಂದೆ ಈಗ ನನಗೆ ಓದಿ ಹೇಳಿದ ರೀತ್ಯಾ ನಿ.ಪಿ.2 ರಂತೆ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ಹೇಳಿ ಬರೆಸಿರುವ ವಿಷಯ ಗೊತ್ತಿದ್ದರೂ ಹಾಗೂ ನಿ.ಪಿ.2 ರಂತೆ ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.1 ರ ದೂರಿನ ವಿಷಯಗಳನ್ನು ನಾನು ಸ್ವತಃ ಬರವಣಿಗೆ ಮಾಡಿದ್ದರೂ ಸಹ ಅದರಲ್ಲಿ ಸಹಿ ಮಾಡುವ ಕಾಲಕ್ಕೆ ಯಾವುದೇ ಬರವಣಿಗೆ ಇರಲಿಲ್ಲ ಎಂಬುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದ್ದರೂ ಸಹ ಅವರ ಪರಿಚಯ ಇಲ್ಲ ಎಂಬುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

***ಪಾಟೀ ಸವಾಲು : ಆರೋಪಿತರ ಪರ : ಶ್ರೀ ಎನ್ ವಿ ಎನ್ ವಕೀಲರಿಂದ***

**(ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂಬುದಾಗಿ ನುಡಿದಿದ್ದಾರೆ.)**

**ಮರು ವಿಚಾರಣೆ : ಇಲ್ಲ.**

**(ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸರಿ ಇದೆ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಕಾರವಾರ